ಹರಾಜ್ ನಡಿಯತಕ್ಕ ಸ್ಥಳದ ಹೆಸರು.	ಹರಾಜ್ ತಾರೀಖು.	ಕಾಡು ಜಾತೀನಾಟುಗಳು.	ಸಾಗವಾನಿ ಜೆಲಗಗಳು.	ಷರಾ.
ಆಯನೂರ ಡಿಪೊ ..	3ನೇ ಸೆಪ್ಟಂಬರ್ 1887	360	..	0
ತರೀಕೆರೇ ಡಿಪೊ ..	6ನೇ ಡಿಟೋ 1887	25	250	0
ಲಕ್ಕುವಳ್ಳೀ ಡಿಪೊ ..	8ನೇ ಡಿಟೋ 1887	100	..	0
ಕಣಬೂರು ಡಿಪೊ ...	12ನೇ ಡಿಟೋ 1887	150	..	0

ಹರಾಜಿನ ಷರತ್ತುಗಳು—ಮೈಸೂರು ಗೆಜೆಟ್‌ನಲ್ಲಿ 1873ನೇ ಇಸವಿ ಜೂನ್ 12ನೇ ಮತ್ತು ನಂಬರು 20ನೇ ಇಸ್ತಿಹಾರ್ ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜ್ ಕಾಲದಲ್ಲಿ ಘೋಷಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಆಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 662.

ಕೋಲಾರದ ಕಸಬೇಲಿದ್ದ ಮೃತಪಟ್ಟ ಅಪ್ಪಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೋಲಾರದ ಕಸಬೇಲಿರುವ ತೋಟದ ವೆಂಕಟಪ್ಪ, ಮೃತಪಟ್ಟ ಸರೀ ಅಪ್ಪಂಣಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲಿ ಕೋಲಾರ್ ಸ್ಥಳದ ವೆಂಕಟಪ್ಪನು ಕೋಲಾರ ವಾಸಸ್ಥನಾಗಿ ಮೃತಪಟ್ಟ ಅಪ್ಪಂಣನ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಪ್ಪನವರ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪಂಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿಸಿ ಅರ್ಜೀ ನಂಬರ್ 690.

ಬೆಂಗಳೂರು ಗುಡಮಯ್ಯನ ಪೇಟೇಲಿದ್ದ ಮೃತಪಟ್ಟ ಬಸವ್ವಸ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ಗುಡಮಯ್ಯನಪೇಟೇಲಿರುವ ಮಂಗವ್ಮ, ಮೃತಪಟ್ಟ ಸದರೀ ಬಸವ್ವನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲಿ ಬೆಂಗಳೂರು ಸ್ಥಳದ ಮಂಗವ್ಮನು ಡಿಟೋ ವಾಸಸ್ಥನಾಗಿ ಮೃತಪಟ್ಟ ಬಸವ್ವನ ಜೆಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಂಗವ್ಮನ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯು ತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವ್ವನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಆಗಸ್ಟು ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.